# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/ 06 /2020-21 ದಿನಾಂಕ: 05.12.2020

### -:ದಿನಾಂಕ:04-12-2020 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:04-12-2020ರ ಶುಕ್ರವಾರ ಅಪರಾಹ್ನ 3.00 ಘಂಟೆಗೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2. | ಶ್ರೀ.ರಂಗನಾಥ.ಆರ್. | ಸಹಾಯಕ ಕಾರ್ಯಪಾಲಕ ಅಭಿಯಂತರರು ಹೂಡಿ | ಹಾಜರಿದ್ದರು. |
| 3. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 4. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 5. | ಶ್ರೀ.ಸುದೀಪ್ | ಕಂದಾಯ ಪರಿವೀಕ್ಷಕರು, | ಹಾಜರಿದ್ದರು. |
| 6. | ಶ್ರೀ.ಸಂಜಯ್ | AE Electrical | ಹಾಜರಿದ್ದರು. |
| 7. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 8. | ಶ್ರೀ.ಸುರೇಶ್ ಬಾಬು | ಮಾರ್ಷಲ್ ಹೂಡಿ | ಹಾಜರಿದ್ದರು. |
| 9. | ಶ್ರೀ.ಸತೀಶ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 10. | ಶ್ರೀ.ಮಂಜುನಾಥ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 11. | ಶ್ರೀ.ಶಿವರಾಜ್.ಡಿ.ಬಿ | ಬೀದಿದೀಪಗಳು ನಿರ್ವಹಣೆ | ಹಾಜರಿದ್ದರು. |
| 12. | ಶ್ರೀ.ಸುದರ್ಶನ್ | SWM Sup. | ಹಾಜರಿದ್ದರು. |
| 13. | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 14. | ಶ್ರೀ.ನಾಗರಾಜ | SWM Sup. | ಹಾಜರಿದ್ದರು. |
| 15. | ಶ್ರೀ.ಶೇಖರಪ್ಪ | SWM Sup. | ಹಾಜರಿದ್ದರು. |
| 16. | ಶ್ರೀ.ಮಹೇಂದ್ರ ಪ್ರಸಾದ್ | ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ | ಹಾಜರಿದ್ದರು. |
| 17. | ಶ್ರೀ.ಸಂಪಂಗಿರಾಮಯ್ಯ | JE Bescom | ಹಾಜರಿದ್ದರು. |
| 18. | ಶ್ರೀ.ಹರೀಶ್. | SWM Sup. | ಹಾಜರಿದ್ದರು. |
| 19. | ಶ್ರೀ.ಡಾ//ಸುರೇಶ್. | ADAH, MDP | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಸಭಾಧ್ಯಕ್ಷರು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸಿ ಸೂಚಿಸಲಾಗಿ. ಮೊದಲಿಗೆ ಬೀಡ ತ್ಯಾಜ್ಯ ಸಂಗ್ರಹಣೆಯ ಬಗ್ಗೆ ಹಾಗೂ ಸಾರ್ವಜನಿಕರಿಂದ ಬಂದ ದೂರಿನಂತೆ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ತ್ಯಾಜ್ಯ ವಿಂಗಡಿಸದ ಮನೆಗಳಿಗೆ ದಂಡ ವಿಧಿಸಲು ಸೂಚಿಸಲಾಯಿತ್ತು.
- ಅಧ್ಯಕ್ಷರು ವಾರ್ಡ್‌ನಲ್ಲಿ SWM ಗೆ ಸಂಬಂಧಿಸಿದಂತೆ ವಾರ್ಡ್‌ನಲ್ಲಿ ಅತಿಯಾದ ದೂರುಗಳಿದ್ದು ಸಂಬಂಧಿಸಿದ ಎಇಇ ರವರು ಸಭೆಗೆ ಗೈರಾಗಿರುವುದರಿಂದ ತ್ಯಾಜ್ಯ ವಿಂಗಡಣೆ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ತಿಳಿಸಿರುತ್ತಾರೆ ಪತ್ರ ಬರೆದು ಜಂಟಿ ಆಯುಕ್ತರ ಗಮನಕ್ಕೆ ತರಲು ಸೂಚಿಸಿರುತ್ತಾರೆ ವಾರ್ಡ್ ವ್ಯಾಪ್ತಿಯ ಬ್ಲಾಕ್ ಸ್ಪಾಟ್‌ಗಳನ್ನು ತೆಗೆಯಲು ಸುದರ್ಶನ್‌ರವರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ. ಬೆಳತ್ತೂರು, ಸಾದರಮಂಗಳ ಹಾಗೂ ರಾಜ್‌ಪಾಳ್ಯ ಈ ಭಾಗಗಳಲ್ಲಿ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ಸರಿಯಾಗಿ ತೆಗೆಯುತ್ತಿರುವುದಿಲ್ಲ ಎಂದು ಸಾರ್ವಜನಿಕರು ತಿಳಿಸಿರುತ್ತಾರೆ.
- ಮಹೇಂದ್ರ ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ಕೊಡಿಗೇಹಳ್ಳಿ ಸುತ್ತ ಮುತ್ತಲು ಹಂದಿಗಳ ಸಮಸ್ಯೆಯನ್ನು ತಿಳಿಸಿರುತ್ತಾರೆ. ಮತ್ತು ಅಧ್ಯಕ್ಷರು ಡಾ//ಸುರೇಶ್ ರವರಿಗೆ ಇದರ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ. ಅದರಂತೆ ಡಾ//ಸುರೇಶ್‌ರವರು ಟೆಂಡರ್ ಪ್ರಕ್ರೀಯೆ ಚಾಲ್ತಿಯಲ್ಲಿರುವುದರಿಂದ ಸ್ವಲ್ಪ ಹಂದಿಗಳನ್ನು ಹಿಡಿಯಲು ತಡವಾಗಿರುತ್ತದೆ ಎಂದು ಸಭೆಗೆ ತಿಳಿಸಿರುತ್ತಾರೆ.
- ಅದರಂತೆ ಡಾ// ಸುರೇಶ್ ರವರು ನಾಯಿಗಳನ್ನು ಸಹ ಸ್ಟೆರಿಲೈಜೆಷನ್ ಮಾಡಲು ತಂಡಗಳಿಗೆ ಸೂಚಿಸಲಾಗಿ ಹೆಚ್ಚಾಗಿ ರೆಸಿಡೆನ್ಶಿಯಲ್ ಹೆಚ್ಚು ಇರುವ ಕಡೆ ನಾಯಿಗಳನ್ನು ಹಿಡಿದು ಸ್ಟೆರಿಲೈಜೆಷನ್ ಮಾಡಲು ಸೂಚಿಸಿರುತ್ತೇನೆಂದು ತಿಳಿಸಿರುತ್ತಾರೆ.
- ಸಭೆಯಲ್ಲಿ ಹಾಜರಿದ್ದ ಆರ್.ಡಬ್ಲ್ಯೂ.ಎ. ರವರು ಹಂದಿಗಳ ಕಾಟದ ಬಗ್ಗೆ ಪತ್ರ ನೀಡುತ್ತಿದ್ದು ಪತ್ರಕ್ಕೆ ಡಾ//ಸುರೇಶ್ ADAH ರವರು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತದೆ.
- ಅಧ್ಯಕ್ಷರು ಮಾರ್ಷಲ್‌ಗಳಿಂದ ನೈಟ್ ಪೆಟ್ರೋಲಿಂಗ್ ಬಗ್ಗೆ ತಿಳಿಸಲಾಗಿ ಮಾರ್ಷಲ್ ರವರು 14000/- ದಂಡದ ಹಣವನ್ನು ಸಾರ್ವಜನಿಕರಿಂದ ವಸೂಲಿ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.
- ಕೋಳಿ ಹಾಗೂ ಮಾಂಸದ ತ್ಯಾಜ್ಯವನ್ನು ವಾರ್ಡ್ ವ್ಯಾಪ್ತಿಯಲ್ಲಿ ಸೊಹೆಲ್ ಎಂಬುವರು ಸಂಗ್ರಹಿಸುತ್ತಿದ್ದು (9663059206) ವಾರ್ಡ್‌ನಲ್ಲಿ ಎಲ್ಲಿಯಾದರೂ ಸಂಗ್ರಹಿಸ ಬೇಕಿದ್ದಲ್ಲಿ ಸದರಿ ರವರಿಗೆ ಸಂಪರ್ಕಿಸಲು ಡಾ// ಸುರೇಶ್ ರವರು ತಿಳಿಸಿರುತ್ತಾರೆ.

**ವಿದ್ಯುತ್:-**

- ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮಂಜುನಾಥ ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ ರವರು ಸ್ವಿಚ್ ಬೋರ್ಡ್‌ಗಳ ಬಗ್ಗೆ ದೂರನ್ನು ತಿಳಿಸಿರುತ್ತಾರೆ. ಸಂಬಂಧಿಸಿದಂತೆ ಎಇ Electrical ರವರು ಕಳೆದ ದಿನಗಳಲ್ಲಿ ಹಲವು ಸ್ವಿಚ್ ಬೋರ್ಡ್‌ಗಳನ್ನು ಹಾಕಲಾಗಿದೆ ಇನ್ನೂ ಉಳಿದ ಸ್ವಿಚ್‌ಗಳನ್ನು 2-3 ದಿನಗಳಲ್ಲಿ ಹಾಕಿಕೊಡುತ್ತೇನೆಂದು ಸಭೆಯಲ್ಲಿ ತಿಳಿಸಿರುತ್ತಾರೆ.
- Electrical ಗೆ ಸಂಬಂದಿಸಿದಂತೆ ಸ್ವಿಚ್‌ಗಳು ಇಲ್ಲದ ಕಡೆ ಸ್ವಿಚ್ ಬೋರ್ಡ್ ಹಾಕಲು ಅಧ್ಯಕ್ಷರು ಸೂಚಿಸಿರುತ್ತಾರೆ.

- ಸತೀಶ್ ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ ರವರು ಬೀದಿ ದೀಪಗಳ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಸಾರ್ವಜನಿಕರು ತಿಳಿಸಿದ ತಕ್ಷಣ ಬೀದಿ ದೀಪಗಳನ್ನು ಸರಿಪಡಿಸಬೇಕಾಗಿ ತಿಳಿಸಿರುತ್ತಾರೆ.

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

- ಸತೀಶ್ ಆರ್.ಡಬ್ಲ್ಯೂ.ಎ. ರವರು ಓಂ ಶಕ್ತಿ ಲೇಔಟ್‌ನಲ್ಲಿ ಗುಂಡಿ ಅಗೆದು ಹಲವು ದಿನಗಳಿಂದ ದುರಸ್ತಿಗೊಳಸದೆ ಹಾಗೆ ಬಿಟ್ಟಿರುತ್ತಾರೆಂದು ಕೋರಿರುತ್ತಾರೆ.
- BWSSB Inspector ರವರಿಗೆ ಅಧ್ಯಕ್ಷರು ಆದಷ್ಟು ಬೇಗ ದುರಸ್ತಿಗೊಳಿಸಿ ಆದಷ್ಟು ಬೇಗ ಗುಂಡಿಯನ್ನು ಮುಚ್ಚಬೇಕು ಎಂದು ಸೂಚಿಸಿರುತ್ತಾರೆ.
- Ward works ಗೆ ಸಂಬಂಧಿಸಿದಂತೆ ಹಲವು 'ಕಡೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು ಸಹ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ ಎಂದು ಸತೀಶ್ ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ ರವರು ತಿಳಿಸಿರುತ್ತಾರೆ.
- ಅಧ್ಯಕ್ಷರು Ward works ಗೆ ಸಂಬಂಧಿಸಿದಂತೆ ಶುರುವಾಗಿರುವ ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸಬೇಕೆಂದು ಗುತ್ತಿಗೆದಾರರಿಗೆ ತಿಳಿಸಲು ವಾರ್ಡ್ ಎಇ ರವರಿಗೆ ಸೂಚಿಸಿರುತ್ತಾರೆ.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ–54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

5/12/20
ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ